# ಎಸಿಟಿ ಫೈಬರ್‌ನೆಟ್‌ನಿಂದ ಉನ್ನತೀಕರಣ

ಫೈಬರ್ ನೆಟ್ ಸಂಸ್ಥೆಯಾದ ಆ್ಯಟ್ರಿಯಾ ಕನ್ವರ್ಜೆನ್ಸ್ ಟೆಕ್ನಾಲಜೀಸ್ ನಗರದಲ್ಲಿ 100 ಎಂಬಿಪಿಎಸ್ ಯೋಜನೆ ಬಿಡುಗಡೆ ಮಾಡಿದೆ. ಎಸಿಟಿ ಈಗಿರುವ ತನ್ನೆಲ್ಲಾ ಗ್ರಾಹಕರನ್ನು ಹೆಚ್ಚಿನ ವೆಚ್ಚವಿಲ್ಲದೆ ಬ್ಯಾಂಡ್ ವಿಡ್ತ್‌ಗೆ ಉನ್ನತೀಕರಿಸಿದೆ. ಎಸಿಟಿ ಫೈಬರ್‌ನೆಟ್ 20 ಎಂಬಿಪಿಎಸ್ ಯೋಜನೆಯಲ್ಲಿದ್ದ ಗ್ರಾಹಕರು 30 ಎಂಬಿಪಿಎಸ್‌ಗೆ , 40 ಎಂಬಿಪಿಎಸ್‌ನಲ್ಲಿದ್ದವರು 50 ಎಂಬಿಪಿಎಸ್‌ಗೆ, ಹಾಗೆಯೇ 60 ಎಂಬಿಪಿಎಸ್ ಇದ್ದವರು 100 ಎಂಬಿಪಿಎಸ್‌ಗೆ ಉನ್ನತೀಕರಣಗೊಂಡಿದ್ದಾರೆ. ಈಗ ಪ್ರತಿಯೊಬ್ಬ ಗ್ರಾಹಕನಿಗೆ 100 ಎಂಬಿಪಿಎಸ್ ವೇಗದ ಅಂತರ್ಜಾಲ ಸೇವೆ ಒದಗಿಸಲು ಸಜ್ಜಾಗಿದೆ. ಇದರಲ್ಲಿ ಗ್ರಾಹಕರು ಪೂರ್ಣಾವಧಿ ಚಲನಚಿತ್ರ, ಎಚ್‌ಡಿ ಚಲನಚಿತ್ರಗಳನ್ನು ನಿಮಿಷದಲ್ಲೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಫೈಬರ್ ಆಪ್ಟಿಕ್ ತಂತ್ರಜ್ಞಾನ ಬಳಕೆಯು ಡೌನ್‌ಲೋಡ್ ಆಗುವ ವೇಗದಲ್ಲೇ ವೀಡಿಯೋ ಚಾಟ್ ಮಾಡಲು ಅವಕಾಶ ಕಲ್ಪಿಸಿಕೊಡುತ್ತದೆ. ಅಷ್ಟೇ ಅಲ್ಲದೆ ಫೈಬರ್ ಆಪ್ಟಿಕ್ ತಂತ್ರಜ್ಞಾನ ಬಳಕೆಯು ಡೌನ್‌ಲೋಡ್ ಆಗುವ ವೇಗದಲ್ಲೇ ಅಪ್‌ಲೋಡ್ ಸಹ ಮಾಡಲು ಅವಕಾಶ ಒದಗಿಸುತ್ತದೆ. ಗ್ರಾಹಕರು ಯಾವುದೇ ಯೋಜನೆಯಲ್ಲಿ ಡೌನ್‌ಲೋಡ್‌ಗೆ ತಮಗೆ ಲಭ್ಯವಿರುವ ಸಂಪೂರ್ಣ ಎಫ್‌ಯುಪಿ ಬಳಸಿಕೊಳ್ಳಬಹುದು ಹಾಗೂ ತಮಗೆ ಇಷ್ಟ ಬಂದಷ್ಟು ಡಾಟಾ ಅಪ್‌ಲೋಡ್ ಮಾಡಬಹುದು.